ಶ್ರೀ ಆರ್. ಎಂ. ಪಾಟೀಲ್.—ನಮ್ಮ ಕೈಯಲ್ಲೇನೂ ಇಲ್ಲ. ಬೆಂಗಳೂರಿನ ವಿಚಾರ ಬೇರೆ, ಬೇರೆ ಕಡೆಗಳ ವಿಚಾರ ಬೇರೆ.

ಶ್ರೀ ಎಂ. ಎಸ್. ಕೃಷ್ಣನ್.—ನಿಮ್ಮ ಪ್ರಜಾಪ್ರಭುತ್ವದಲ್ಲಿ ಚುನಾಯಿತ ಸದಸ್ಯರನ್ನೊಳಗೊಂಡ ಕಾರ್ಪೊರೇಷನ್ನುಗಳು ಕೆಲಸ ಮಾಡಕೂಡದು ಎಂದೇ ಅಲ್ಲವೇ ಬೆಂಗಳೂರು, ದಾವಣಗೆರೆ ಹಾಗೂ ಹುಬ್ಬಳ್ಳಿಗಳಲ್ಲಿ ಇದ್ದ ಕಾರ್ಪೊರೇಷನ್‌ಗಳನ್ನು ಸೂಪರ್‌ಸೀಡ್ ಮಾಡಿರುವುದು ?

ಶ್ರೀ ಆರ್. ಎಂ. ಪಾಟೀಲ್.—ಸಂದರ್ಭಕ್ಕೆ ಅನುಸರಿಸಿ, ಅವಶ್ಯಕತೆಗಳನ್ನು ಅನುಸರಿಸಿ ಯಾವುದು ಜನತೆಗೆ ಯೋಗ್ಯವಾಗಿದೆಯೋ ಅದನ್ನು ನೋಡಿ ಮಾಡಲಾಗಿದೆ.

Irrigable Lands against Cultivable Lands

103. **Sri C. K. RAJAIAH SHETTY** (Chikkanayakanahally).—

Will the Minister for Public Works be pleased to state :—

(*a*) the percentage of irrigable lands against cultivable lands in Tumkur District (Talukwise information may be furnished) ;

(*b*) the Taluks which are classified as backward by P. W. D. Department ;

(*c*) whether any projects are sanctioned in Taluks, when the percentage of irrigation falls below district average ; if so, the names of such Projects ?

A.—**Sri ALUR HANUMANTHAPPA** (Deputy Minister for Minor Irrigation).—

(*a*) Tumkur Taluk	...	15·36	per cent
Gubbi Taluk	...	11·51	do
Tiptur Taluk	...	9·24	do
Turvekere Taluk	...	8·94	do
Kunigal Taluk	...	28·13	do
Sira Taluk	...	8 00	do
Madhugiri Taluk	...	11·60	do
Koratagere Taluk	...	14·70	do
Pavagada Taluk	...	8·30	do
Chicknaikanahalli Taluk	...	3·20	do
District average	...	11·81	per cent

(*b*) No such classification has been made by the Public Works Department.

(*c*) No.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ನೀವು ಇಲ್ಲಿ ಕೊಟ್ಟಿರುವ ಕೈಟ್‌ಮೆಂಟಿನಲ್ಲಿ ಚಿಕ್ಕನಾಯಕನ ಹಳ್ಳಿಯಲ್ಲಿ ಶೇಕಡ 3·20 ಎಕರೆ ಗಳಷ್ಟು ಮಾತ್ರ ನೀರಾವರಿ ಜಮೀನು ಎಂದು ಹೇಳಿದ್ದೀರಿ. ನೀರಾವರಿಯನ್ನು ನಮ್ಮ ಚಿಕ್ಕನಾಯಕನ ಹಳ್ಳಿಯಲ್ಲಿ ಜಾಸ್ತಿ ಮಾಡಬೇಕೆನ್ನುವ ಉದ್ದೇಶ ಸರಕಾರಕ್ಕೆ

ಇದೆಯೇ ಇಲ್ಲವೇ ಎನ್ನುವುದು ಗೊತ್ತಾಗುವುದಿಲ್ಲ. ಇಷ್ಟತ್ತು ವರ್ಷಗಳಾದರೂ ಸರಕಾರ ಈ ತಾಲ್ಲೂಕಿನ ಬಗ್ಗೆ ಏನೂ ಮಾಡದೇ ಇರುವುದರಿಂದ ಈಗ ಸರಕಾರದವರು ಇನ್ನೂ ಹೆಚ್ಚು ನೀರಾವರಿ ಕೆಲಸಗಳನ್ನು ಮಾಡಲು ಏನು ಮಾಡಬೇಕೆಂದು ಇದ್ದಾರೆ ?

† ಶ್ರೀ ಅಲೂರು ಹನುಮಂತಪ್ಪ.—ಚಿಕ್ಕನಾಯಕನ ಹಳ್ಳಿ ತಾಲ್ಲೂಕಿನಲ್ಲಿ ನೀರಾವರಿ ಕಾಮಗಾರಿಗಳನ್ನು ಮಾಡಲಾಗುತ್ತಿದೆ. ಈಗಾಗಲೇ ದೇವರಪ್ಪನ ದೊಡ್ಡಿ, ಕೊರಟಪಳ್ಳಿ ಕೆರೆ ಮತ್ತು ಮಳಲಿ ಕೆರೆಗಳನ್ನು ರಿಪೇರಿ ಮಾಡಲು 8,92,000 ರೂಪಾಯಿಗಳ ಕೆಲಸಗಳನ್ನು ಮಾಡಲಾಗಿದೆ ಮತ್ತು ಇನ್ನೂ 17 ಲಕ್ಷ ರೂಪಾಯಿಗಳ ಅಂದಾಜನ್ನು ಕೂಡ ತಯಾರು ಮಾಡಲಾಗಿದೆ. ಚಿಕ್ಕನಾಯಕನ ಹಳ್ಳಿಯಲ್ಲಿ ನಣ್ಣ ನೀರಾವರಿ ಯೋಜನೆಗಳನ್ನು ಮಾಡಬೇಕೆಂದು ಇವನ್ನೆಲ್ಲಾ ಮಾಡಲಾಗುತ್ತಿದೆ. ಇದೂ ಅಲ್ಲದೆ ಕೆಲವು ಕೆಲಸಗಳಿಗೆ ಈಗಾಗಲೇ ಇಲ್ಲಿ ಟೆಂಡರುಗಳನ್ನು ಕರೆಯಲಾಗಿದೆ. ಇದು ಬಂದಮೇಲೆ ಇದರ ಕೆಲಸಗಳನ್ನು ಕಾರ್ಯಗತ ಮಾಡಲಾಗುತ್ತದೆ. ಮತ್ತು ಗಂಟೆಹಳ್ಳಿ ಪ್ರಾಜೆಕ್ಟ್‌ಗಾಗಿ ಟೆಂಡರುಗಳನ್ನು ಕೂಡ ಕರೆಯಲಾಗಿದೆ ಮತ್ತು ಇದರ ಅಂದಾಜು ಸುಮಾರು 12,40,000 ರೂಪಾಯಿಗಳಷ್ಟು ಸರಕಾರದ ಗಮನಕ್ಕೆ ಬಂದಿದೆ. ಇದನ್ನೂ ಕಾರ್ಯಗತ ಮಾಡಬೇಕೆಂದೂ ಇದೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಕೇಂದ್ರ ಸರಕಾರದಿಂದ ಹೆಚ್ಚು ಹಣ ಬರುವುದು ಸಾಧ್ಯತೆ ಇದೆಯೇ ?

2-00 P.M.

ಶ್ರೀ ಅಲೂರು ಹನುಮಂತಪ್ಪ.—ಕೇಂದ್ರ ಸರಕಾರದಿಂದ ಹೆಚ್ಚು ಹಣ ಪಡೆಯುವುದಕ್ಕೆ ನಿರೀಕ್ಷಣೆ ಮಾಡುತ್ತಿದ್ದೇವೆ. ಕೇಂದ್ರದಿಂದ ಬರತಕ್ಕಂಥ ಹಣದ ಆಶ್ವಾಸನೆ ನೋಡಿಕೊಂಡು ಹೆಚ್ಚು ಹಣ ಒದಗಿಸುತ್ತೇವೆ.

ಶ್ರೀ ಎಚ್. ಸಿದ್ದವೀರಪ್ಪ.—ಸ್ವಾಮಿ, ಈ ಮಂತ್ರಿಗಳು ಯಾವಾಗಲೂ ಆದಷ್ಟು ಬೇಗನೆ ಮಾಡುತ್ತೇವೆ, ಆದಷ್ಟು ಬೇಗನೆ ಎಂದು ಉತ್ತರ ಹೇಳುವುದರಿಂದ ಇವರಿಗೆ ಆದಷ್ಟು ಬೇಗನೆ ಮಂತ್ರಿಗಳು ಎಂದು ನಾಮಕರಣ ಏತಕ್ಕೆ ಮಾಡಬಾರದು ?

(ನಗು)

Mr. DEPUTY SPEAKER.—Now short notice Questions may be taken up.

SHORT NOTICE QUESTIONS AND ANSWERS

Theft of Brandy Bottles

4. Sri B. B. SAYANAK (Belgaum).—

Will the Minister for Home and Labour be pleased to state :—

(*a*) whether it is a fact that 99 bottles of brandy in the custody of Cantonment Court, Belgaum, were stolen on 29th November 1967 ;

(*b*) if so, the number of persoos arrested ;

(*c*) the number of times the brandy bottles were stolen in this year and by whom ?

A.—Sri M. V. RAMA RAO (Minister for Home and Labour).—

(*a*) Yes. On 29th November 1967, 98 large and six small bottles containing Goa Fenny and brandy were stolen from the Muddemal room of Cantonment Court, Belgaum.